# ವ್ಯಾಪಾರಂ ಚೌಕಾಸಿ ಚಿಂತನಂ

■ ಶ್ರೀರಂಜನಿ ಅಡಿಗ
ಕಲೆ: ಸಂತೋಷ್ ಸಸಿಹಿತ್ಲು

'ವ್ಯಾಪಾರಂ ದ್ರೋಹ ಚಿಂತನಂ' ಎಂಬ ಮಾತಿದೆ. ಹಾಗೆಯೇ 'ವ್ಯಾಪಾರಂ ಚೌಕಾಸಿ ಚಿಂತನಂ' ಎಂಬುದು ವ್ಯಾಪಾರ ಮಾಡಿದವರೆಲ್ಲರ ಅನುಭವವೂ ಹೌದು.

ಚೌಕಾಸಿ ಎನ್ನುವುದು ಒಂದು ಕಲೆ. ಬಾಯಿಯಿದೆಯೆಂದು ಚೌಕಾಸಿ ಮಾಡಿದರೆ ಬೈಗುಳವೇ ಸರಿ. ಅದಕ್ಕೆ ನಾಲಗೆ ಗಟ್ಟಿಬೇಕು, ಧೈರ್ಯಬೇಕು, ಸುತ್ತಲೂ ನೆರೆದಿರುವ ನೋಟಗಳಿಗೆ ದಿವ್ಯನಿರ್ಲಕ್ಷ್ಯ ತೋರುವವರಾಗಿರಬೇಕು. ಮುಖ್ಯವಾಗಿ, ವಸ್ತುವಿನ ನಿಖರ ಬೆಲೆ ಗೊತ್ತಿದ್ದರೆ ಅವನೆಷ್ಟು ಏರಿಸಿದ್ದಾನೆ ಮತ್ತು ಎಷ್ಟು ಹೇಳಿದರೆ ಯಾವ ರೇಟಿಗೆ ಕೊಡಬಹುದು ಎಂಬ ದೂರದೃಷ್ಟಿಯಿರಬೇಕು. ಅವನು 'ಆಗದೇ ಹೋಯಿತು' ಎಂದರೂ ವಾಪಾಸು ದಬಾಯಿಸಿ, 'ಬೇಕಾದರೆ ಕೊಡು, ಇಲ್ಲದಿದ್ದರೆ ಬಿಡು' ಎನ್ನುವ ಎದೆಗಾರಿಕೆ ಇರಬೇಕು. ಹಾಗೆಯೇ ವ್ಯಾಪಾರಿ 'ಬೇಕಾದರೆ ಕೊಳ್ಳಿ, ಇಲ್ಲದಿದ್ದರೆ ಬಿಡಿ' ಎಂದು ಪಟ್ಟು ಹಾಕಿದರೂ 'ನನಗೂ ಬೇಡ ನಿಮಗೂ ಬೇಡ' ಎಂದು ಮಧ್ಯದ ರೇಟಿಗೆ ಫಿಕ್ಸ್ ಆಗಿ ಕದನವಿರಾಮ ಘೋಷಿಸಿಬಿಡುವ ಛಾತಿವಂತರಾಗಿರಬೇಕು. ಒಮ್ಮೆ ಹೀಗೆ ಗಾಂಧೀಬಜಾರಿನ ಮಾರುಕಟ್ಟೆಯಲ್ಲಿ ಮಹಿಳೆಯೊಬ್ಬರ ಚೌಕಾಸಿ ಎಷ್ಟು ತಾರಕಕ್ಕೆ ಹೋಗಿತ್ತು ಎಂದರೆ, ವ್ಯಾಪಾರಿಯೇ ರೋಸಿಹೋಗಿ – 'ಯೋ ಅಮ್ಮ... ಅಷ್ಟು ರೇಟಿಗೆ ಕೊಡೋ ಬದಲು ಫ್ರೀಯಾಗೇ ಕೊಟ್‌ಬಿಡ್ತೀನಿ. ತಗೊಂಡ್ ಹೋಗು' ಎಂದು ದಬಾಯಿಸಿಬಿಟ್ಟಿದ್ದ. ಆ ಆ ಹೆಂಗಸೇನೂ ಕಡಿಮೆಯಿರಲಿಲ್ಲ. 'ಫ್ರೀಯಾದ್ರೆ ಎರಡು ಕೊಡು' ಎಂದು ಟಾಂಗ್ ಕೊಟ್ಟಿದ್ದಳು.

ನಾನು ಗಮನಿಸಿದಂತೆ ಚೌಕಾಸಿ ವಿದ್ಯೆ ಒಲಿದಿರುವುದು ಹೆಣ್ಣಿಗೇ. ಚೌಕಾಸಿ–ಚೌಕಾ'ಶಿ'ಯಲ್ಲಿ **she** ಇರುವುದರಿಂದಲೇ ಹೆಂಗಸರು ಲಾಯಕ್ಕು ಎಂಬುದು ಕವಿ ಡುಂಡಿರಾಜರ ಅಭಿಪ್ರಾಯ. ನೂರು ರೂಪಾಯಿಗೆ ಮೂರು ಕೇಜಿ ಈರುಳ್ಳಿಯನ್ನು ನಾಲ್ಕು ಕೇಜಿಯಾಗಿಸಿ ಗಿಟ್ಟಿಸಿಕೊಳ್ಳುವ ಶಕ್ತಿ ಇರುವುದು ಹೆಂಗಸರಿಗಲ್ಲದೆ ಗಂಡಸರಿಗೇ? ಅದರಲ್ಲೂ ಬೀದಿಬದಿಯ ವ್ಯಾಪಾರಕ್ಕೆ ಹೆಂಗಸರೇ ಯೋಗ್ಯರು. ದೊಡ್ಡ ದೊಡ್ಡ ಕಾರುಗಳಲ್ಲಿ ಬರುವ ಹೆಂಗಸರೂ ಚೌಕಾಸಿ ಮಾಡುತ್ತಾರೆ. 'ಹೆಂಗಸರು ಕಾಶಿಗೆ ಹೋದರೂ ಚೌಕಾಸಿ ಬಿಡಲ್ಲ: ಎಂಬುದು ಗಂಡಸರು ಕಂಡುಕೊಂಡ ಸತ್ಯ.

ನನ್ನ ಪತಿರಾಯರಿಗೆ ಚೌಕಾಸಿ ವ್ಯಾಪಾರವೆಂದರೇನೆಂದೇ ತಿಳಿಯದು. 'ಇಪ್ಪತ್ತಕ್ಕೆ ಒಂದು ಕಟ್ಟು, ಐವತ್ತಕ್ಕೆ ಮೂರುಕಟ್ಟು' ಎಂದರೆ, 'ಮೂರು ಕಟ್ಟಿಗೆ ಅರವತ್ತಾಗಬೇಕಲ್ಲ' ಎಂದು ಅವನ ತಪ್ಪುಲೆಕ್ಕವನ್ನು ಸರಿಪಡಿಸಿ, ತಾವು ಬೆಪ್ಪುತಕ್ಕಡಿಯಾಗುತ್ತಾರೆ. ಒಮ್ಮೆ ತರಕಾರಿ ವ್ಯಾಪಾರ ಮಾಡಿ ಚೌಕಾಸಿ ಮಾಡದೆ ಹೇಳಿದಷ್ಟು ದುಡ್ಡು ಕೊಟ್ಟುಬಂದಿದ್ದರು. ಆ ವ್ಯಾಪಾರಿ ಇವರ ಮುಗ್ಧತೆಯನ್ನು ಕಂಡು, ಕೇಳದಿದ್ದರೂ ಎರಡು ಲಿಂಬೆಹಣ್ಣು, ಹಿಡಿ ಹಸಿಮೆಣಸನ್ನು

